
ವೇದಾವತಿ ಎಚ್.ಎಸ್.

ಕಲೆ: ಗಣೇಶ ಆಚಾರ್ಯ



# ಕೋಲು

ಒಂದು ಊರಿನಲ್ಲಿ ಒಬ್ಬ ಭಿಕ್ಷುಕನಿದ್ದ. ಅವನ ಕೈಯಲ್ಲಿ ಯಾವಾಗಲೂ ಒಂದು ಉದ್ದನೆಯ ಕೋಲು ಇರುತ್ತಿತ್ತು. ಆ ಕೋಲಿನ ಕೊನೆಯ ಎರಡು ತುದಿಗಳಲ್ಲೂ ಹಿತ್ತಾಳೆಯ ಹೊದಿಕೆ ಹಾಕಲಾಗಿತ್ತು. ಭಿಕ್ಷುಕ ಆ ಕೋಲನ್ನು ಕುಳಿತಾಗ, ನಿಂತಾಗ, ತಿನ್ನುವಾಗ, ಹೀಗೆ ಯಾವಾಗಲೂ ಕೈಯಲ್ಲಿ ಹಿಡಿದುಕೊಂಡೇ ಇರುತ್ತಿದ್ದ. ನಿದ್ದೆ ಮಾಡುವಾಗಲೂ ತಲೆಕೆಳಗೆ ಇಟ್ಟುಕೊಳ್ಳುತ್ತಿದ್ದ.

ಭಿಕ್ಷುಕ ಕೋಲನ್ನು ಜೋಪಾನವಾಗಿ ಕಾಪಾಡುವುದನ್ನು ಕಂಡ ಅದೇ ಊರಿನ ಸೋಮನಿಗೆ ಆಶ್ಚರ್ಯವಾಗಿತ್ತು. ಭಿಕ್ಷುಕ ಕುರುಡನೂ, ಕುಂಟನೂ ಆಗಿರಲಿಲ್ಲ. ಗಟ್ಟಿಮುಟ್ಟಾಗಿದ್ದ ಭಿಕ್ಷುಕ ಸದಾ ಕೋಲು ಹಿಡಿದುಕೊಂಡಿರುವುದು ಮತ್ತು ಮಲಗಿದಾಗಲೂ ಅದನ್ನು ತಲೆಯ ಕೆಳಗಿಟ್ಟುಕೊಳ್ಳುವುದನ್ನು ಕಂಡ ಸೋಮ ಅದರಲ್ಲಿ ಬೆಲೆಬಾಳುವುದೇನೊ ಇರಬೇಕೆಂದು